ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY, RESEARCH AND REFERENCE BRANCH
ಪತ್ರಿಕಾ ತುಣುಕುಗಳು
PAPER CLIPPINGS
ಇಲಾಖೆ / ವಿಷಯ : DEPARTMENT / SUBJECT:
ಪತ್ರಿಕೆಯ ಹೆಸರು : NAME OF THE NEWS PAPER:
ದಿನಾಂಕ : DATE :

# ಸಂಸದೀಯ ಮೌಲ್ಯ ಮರುಸ್ಥಾಪಿಸಿ

ವಿ.ವಾ. 25-2-2021

## ಸಂವಿಧಾನದ ಆಶಯಕ್ಕೆ ಪೂರಕ ಸುಧಾರಣೆಗೆ ಒತ್ತಾಸೆ । ಆತ್ಮಾವಲೋಕನ ಸಭೆ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಜನಪರ ಕಾಳಜಿ, ಬದ್ಧತೆ, ನಿಷ್ಠೆ ಮರೆತ ಪರಿಣಾಮ ಸಂಸದೀಯ ಮೌಲ್ಯಗಳು ಕುಸಿತ ಕಂಡಿವೆ ಎಂಬ ವಿವಿಧ ಕ್ಷೇತ್ರಗಳ ಗಣ್ಯರ ಕಳವಳಕ್ಕೆ ರಾಜಕೀಯ ನೇತಾರರು ಧ್ವನಿಗೂಡಿಸಿ, ಸಂವಿಧಾನದ ಆಶಯಕ್ಕೆ ಅನುಗುಣವಾಗಿ ತುರ್ತು ಸುಧಾರಣೆಯ ಅಗತ್ಯತೆಗೆ ಒತ್ತಾಸೆಯಾದರು.

ವಿಧಾನಸೌಧದಲ್ಲಿ ವಿಧಾನ ಮಂಡಲ ಹಾಗೂ ಕಾಮನ್ ವೆಲ್ತ್ ಸಂಸದೀಯ ಸಂಘ ರಾಜ್ಯ ಶಾಖೆ ಜಂಟಿಯಾಗಿ ಬುಧವಾರ ಏರ್ಪಡಿಸಿದ್ದ 'ಸಂಸದೀಯ ಮೌಲ್ಯಗಳ ಕುಸಿತ ತಡೆಗಟ್ಟುವ ನಿಟ್ಟಿನಲ್ಲಿ ಒಂದು ಆತ್ಮಾವಲೋಕನ ಸಭೆ' ಮುಕ್ತ ಚರ್ಚೆಗೆ ವೇದಿಕೆಯಾಯಿತು.

ಸಂಸದೀಯ ಮೌಲ್ಯಗಳ ಕುಸಿತದಿಂದ ಪ್ರಜಾತಂತ್ರ ವ್ಯವಸ್ಥೆಯೇ ಅಪಾಯಕ್ಕೆ ಸಿಲುಕಿದೆ ಎನ್ನುವ ಆತಂಕ ವ್ಯಕ್ತವಾಯಿ. ಅಲ್ಲದೆ, ಜನರ ತಾಳ್ಮೆ ಕಟ್ಟೆಯೊಡೆದು ಕಾನೂನು ಕೈಗೆತ್ತಿಕೊಂಡರೆ ಅರಾಜಕ ಸ್ಥಿತಿ, ಸರ್ವಾಧಿಕಾರ ಪ್ರಾಬಲ್ಯ ಮೆರೆಯಲಿದೆ ಎಂದು ಸಭೆ ಎಚ್ಚರಿಸಿತು.

**ಜನಪರ ಆಡಳಿತ ರೂಪಿಸುವ ಹೊಣೆ:** ಸ್ವಾರ್ಥ, ಸ್ವಹಿತ ಮರೆತು ವ್ಯಕ್ತಿಗಿಂತ ಸಮಷ್ಟಿಯ ಹಿತವೇ ಮುಖ್ಯವಾಗಬೇಕಿದೆ. ಜನಪರ ಆಡಳಿತ ರೂಪಿಸುವ ಹೊಣೆ ಹಾಗೂ ರಾಷ್ಟ್ರಪತಿ ಗಾಂಧೀಜಿ ಕಂಡ ಸರ್ವೋದಯ ನನಸಾಗಿಸುವ ಹೊಣೆ ಜನಪ್ರತಿನಿಧಿಗಳದ್ದಾಗಿದೆ ಎಂದು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಹೇಳಿದರು.

**ಚುನಾವಣೆ ವ್ಯವಸ್ಥೆ ಬದಲಾವಣೆ ಮುಖ್ಯ:** ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ ಮಾತನಾಡಿ ಚುನಾವಣೆ ವ್ಯವಸ್ಥೆ ಬದಲಾಗದ ಹೊರತು ಸಂಸದೀಯ ವ್ಯವಸ್ಥೆಯಲ್ಲಿ ಸುಧಾರಣೆ ಸಾಧ್ಯವಿಲ್ಲ. ಮಾತೃ ಹೃದಯದವರು ಮಾತ್ರ ಸಂವಿಧಾನದ ಆಶಯಗಳನ್ನು ಅರ್ಥ ಮಾಡಿಕೊಳ್ಳಬಲ್ಲರು ಎಂದರು. ವರ್ಷದಲ್ಲಿ 60 ದಿನಗಳ ಕಾಲ ಕಲಾಪ ನಡೆಯಬೇಕೆಂಬ ನಿಯಮ ಪಾಲನೆ, ಪಕ್ಷಾಂತರ ನಿಷೇಧ ಕಾಯ್ದೆಗೆ ಬಲ ತುಂಬಬೇಕು ಎಂದ ಸಿದ್ದರಾಮಯ್ಯ, ಅಧಿವೇಶನ ಅವಧಿಯನ್ನು ಸರ್ಕಾರದ ಬದಲಿಗೆ ಸ್ಪೀಕರ್ ಹಾಗೂ ಸಭಾಪತಿ ನಿಗದಿಪಡಿಸಬೇಕು ಎಂದರು.

**ವಿಚಾರ ಮಂಡಿಸಿದವರು:** ಉಪ ಮುಖ್ಯಮಂತ್ರಿ ಗೋವಿಂದ ಕಾರಜೋಳ, ಡಾ.ಗುರುರಾಜ ಕರಜಗಿ, ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿಗಳಾದ ಜಸ್ಟಿಸ್ ಕುಮಾರ್, ಜಸ್ಟಿಸ್ ಎ.ಜೆ.ಸದಾಶಿವ,, ಹಿರಿಯ ಪತ್ರಕರ್ತರಾದ ಹುಣಸವಾಡಿ ರಾಜನ್, ಶತಾವಧಾನಿ ಗಣೇಶ್, ಚಕ್ರವರ್ತಿ ಸೂಲಿಬೆಲೆ, ಮಾಳವಿಕಾ ಅವಿನಾಶ್ ಮತ್ತಿತರರು.



ಸಭೆಗೆ ಸಿಎಂ ಯಡಿಯೂರಪ್ಪ ಚಾಲನೆ ನೀಡಿದರು. ಸ್ಪೀಕರ್ ವಿಶ್ವೇಶ್ವರ ಹೆಗಡೆ ಕಾಗೇರಿ, ಸಭಾಪತಿ ಬಸವರಾಜ ಹೊರಟ್ಟಿ, ಪ್ರತಿಪಕ್ಷ ನಾಯಕರಾದ ಸಿದ್ದರಾಮಯ್ಯ ಹಾಗೂ ಎಸ್.ಆರ್,. ಪಾಟೀಲ್ ಹಾಜರಿದ್ದರು.



ರಾಜಕೀಯ ಕ್ಷೇತ್ರಕ್ಕೆ ದೊರೆತ ಅತಿಯಾದ ಮಹತ್ವ ಸಂಸದೀಯ ಮೌಲ್ಯಗಳ ಅವನತಿಗೆ ಕಾರಣ. ಜನಪ್ರತಿನಿಧಿಗಳ ಓಲೈಕೆ ತಪ್ಪಬೇಕು. ಅತಿಯಾದ ಪ್ರಾತಿನಿಧ್ಯ ಅಪಾಯಕಾರಿ. ಜನಪ್ರತಿನಿಧಿಗಳಲ್ಲಿ ಪ್ರಚಾರದ ಹಪಾಹಪಿಯಿದ್ದು, ಓದಿನ ಕೊರತೆಯಿದೆ.

। ಡಾ.ನರಹಳ್ಳಿ ಬಾಲಸುಬ್ರಹ್ಮಣ್ಯ ಸಾಹಿತಿ



ರಾಜಕೀಯ ಪಕ್ಷಗಳಲ್ಲಿ ಆಂತರಿಕ ಪ್ರಜಾಪ್ರಭುತ್ವ ಮರುಸ್ಥಾಪನೆ, ಪ್ರಜಾಪ್ರತಿನಿಧಿ ಕಾಯ್ದೆಯಲ್ಲಿ ಸುಧಾರಣೆ, ಪಕ್ಷಾಂತರ ನಿಷೇಧ ಕಾಯ್ದೆ ಬಿಗಿಗೊಳಿಸುವುದು ಅಗತ್ಯ. ಒಂದು ದೇಶ ಒಂದು ಚುನಾವಣೆ ಚಿಂತನೆ ಉತ್ತಮವಾಗಿದೆ. ಅವಿಶ್ವಾಸದ ಜತೆಗೆ ವಿಶ್ವಾಸ ನಿರ್ಣಯಕ್ಕೆ ಅವಕಾಶ ಕಲ್ಪಿಸಬೇಕು.

। ಬಿ.ಎಲ್.ಶಂಕರ್ ಮಾಜಿ ಸಭಾಪತಿ

### ಸಭೆಯಲ್ಲಿ ಚರ್ಚೆಯಾದ ಪ್ರಮುಖಾಂಶಗಳು

- ಜನರಲ್ಲಿ ನಂಬಿಕೆ, ವಿಶ್ವಾಸಾರ್ಹತೆ ಹೆಚ್ಚಿಸಿದರೆ ಪ್ರಜಾಪ್ರಭುತ್ವ ವ್ಯವಸ್ಥೆ ಇನ್ನಷ್ಟು ಗಟ್ಟಿ
- ಚುನಾವಣೆಗೆ ಸ್ಪರ್ಧಿಸುವುದಕ್ಕೆ ಕನಿಷ್ಠ ವಿದ್ಯಾರ್ಹತೆ ಕಡ್ಡಾಯ ಸಲ್ಲದು
- ಪಂಚಾಯಿತಿಗಳಿಗೆ ಹೆಚ್ಚಿನ ಅಧಿಕಾರ ನೀಡಿ ಅಧಿಕಾರ ವಿಕೇಂದ್ರೀಕರಣ ವ್ಯವಸ್ಥೆ ಬಲವರ್ಧನೆ
- ಚುನಾವಣೆ ವ್ಯವಸೆಯಲ್ಲಿ ಆಮೂಲಾಗ್ರ ಬದಲಾವಣೆ
- ಸರ್ಕಾರದಿಂದಲೇ ಚುನಾವಣೆ ವೆಚ್ಚ ಭರಿಸುವುದು
- ರಾಜಕೀಯ ಪಕ್ಷಗಳಲ್ಲಿ ಆಂತರಿಕ ಪ್ರಜಾಪ್ರಭುತ್ವ ಮರುಸ್ಥಾಪನೆ
- ಪಕ್ಷಾಂತರ ನಿಷೇಧ ಕಾಯ್ದೆಯನ್ನು ಮತ್ತಷ್ಟು ಬಲಪಡಿಸಬೇಕು
- ಅಭ್ಯರ್ಥಿ ಆಯ್ಕೆಗೆ ಸಂವಿಧಾನ, ತತ್ವ-ಸಿದ್ಧಾಂತ, ಸಮಾಜ ಸೇವೆ ಅರಿವು ಮಾನದಂಡ
- ಜನಪ್ರತಿನಿಧಿಗಳಿಗೆ ತರಬೇತಿ ಕಡ್ಡಾಯ, ಉತ್ತಮ ಸಂಸದೀಯ ಪಟು ವಾರ್ಷಿಕ ಪ್ರಶಸ್ತಿ
- ವರ್ಷಕ್ಕೆ ಕನಿಷ್ಠ 60 ದಿನಗಳ ಅಧಿವೇಶನದ ನಿಯಮ ಕಡ್ಡಾಯವಾಗಿ ಪಾಲನೆ
- ವಿಧಾನ ಪರಿಷತ್‌ಗೆ ನೇಮಕದ ವೇಳೆ ವಿವಿಧ ಕ್ಷೇತ್ರಗಳ ಪ್ರಮುಖರಿಗೆ ಪ್ರಾಶಸ್ತ್ಯ
- ಆಮಿಷಗಳಿಗೆ ಮಾರು ಹೋಗದಂತೆ ಮತದಾರರಲ್ಲೂ ಜಾಗೃತಿ ಮೂಡಿಸುವುದು